# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 270 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 29.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕಳೆದ 2 ವರ್ಷಗಳಲ್ಲಿ ಕೈಗೊಂಡ ಯೋಜನೆಗಳಾವುವು; | ಕರ್ನಾಟಕ ನೀರಾವರಿ ನಿಗಮದಡಿ 2023-24 ಮತ್ತು 2024-25ನೇ ಸಾಲಿನಲ್ಲಿ ಕೈಗೊಂಡ ಯೋಜನೆಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ಅವುಗಳಲ್ಲಿ ಎಷ್ಟು ಯೋಜನೆಗಳ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ; ಬಾಕಿ ಇರುವ ಕಾಮಗಾರಿಗಳಾವುವು; | |
| ಇ) | ಬಾಕಿ ಇರುವ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; (ಪೂರ್ಣ ಮಾಹಿತಿ ಒದಗಿಸುವುದು) | |
| ಈ) | ಸದರಿ ಕೈಗೊಂಡ ಯೋಜನೆಗಳಲ್ಲಿ ದಾವಣಗೆರೆ ಜಿಲ್ಲೆಗೆ ಮೀಸಲಿಟ್ಟು ಕೈಗೊಂಡ ನೀರಾವರಿ ಕಾಮಗಾರಿಗಳಾವುವು; ಅವುಗಳಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಯೋಜನೆಗಳಾವುವು? | 2023-24 ಮತ್ತು 2024-25ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಯಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. |

ಜಸಂಇ 18 ಎಂಎಲ್ಎ 2026

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

# ಅನುಬಂಧ

ರೂ. ಕೋಟಿಗಳಲ್ಲಿ

| ಕ್ರ. ಸಂ | ವರ್ಷ | ಯೋಜನೆಯ ಹೆಸರು | ಯೋಜನಾ ಅಂದಾಜು ಮೊತ್ತ | ಕೆಲಸವಹಿಸಿದ ದಿನಾಂಕ | ಟೆಂಡರ್ ನಿಯಮಾನುಸಾರ ಪೂರ್ಣಗೊಳಿಸಬೇಕಾದ ದಿನಾಂಕ | ಷರಾ ( ಪ್ರಸ್ತುತ ಹಂತ) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 2023-24 | ಗುಂಜಳ್ಳಿ ಗ್ರಾಮದ ಬಸಪ್ಪ ಹಾಗೂ ಇತರೆ ಕೆರೆಗಳನ್ನು ತುಂಬಿಸುವ ಯೋಜನೆ | 146.80 | 07.03.2024 | 07.03.2026 | ಸದರಿ ಯೋಜನೆಗೆ ಸಕಾರದ ಆದೇಶ ಸಂ:ಜಸಂಇ 36 ಎಂಟಿಪಿ 2023 ದಿನಾಂಕ:29.08.2023 ರಲ್ಲಿ ರೂ.146.80 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಬಹುತೇಕ ಪೂರ್ಣಗೊಂಡಿರುತ್ತದೆ. |
| 2 | 2023-24 | ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಉಚಗಾವ್ ಹೋಬಳಿಯ ಹಾಗೂ ಸಂತಿಬಸ್ತವಾಡ ಗ್ರಾಮದ ಮತ್ತು ಸುತ್ತಮುಲ್ಲಿನ ಗ್ರಾಮಗಳ ಕೆರೆಗಳನ್ನು ತುಂಬಿಸುವ ಯೋಜನೆ (ನಬಾರ್ಡ 29 ) | 287.55 | 24.04.2025 | 23.04.2028 | ಆರ್.ಐ.ಡಿ.ಎಫ್ -29 ಅಡಿಯಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದ್ದು, ನಬಾರ್ಡನಿಂದ ದಿನಾಂಕ: 02.11.2023 ರಂದು ತಾತ್ವಿಕ ಅನುಮೋದನೆ ದೊರೆತಿದ್ದು, ಸರ್ಕಾರದಿಂದ ಜಸಇಂ 103 ಎಂಪಿಜಡ್ 2023 ಬೆಂಗಳೂರು ದಿನಾಂಕ: 12.02.2024 ರಡಿ ಆರ್.ಐ.ಡಿ.ಎಫ್. 29 ರಡಿ ರೂ 200.00 ಕೋಟಿಗಳೂ ಹಾಗೂ ರೂ 87.55 ಕೋಟಿಗಳು ರಾಜ್ಯ ಅನುದಾನದಲ್ಲಿ ಭರಿಸುವಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದೆ. ರೈಸಿಂಗ ಮೇನ್ , Pressure Distribution HDPE ಪೈಪ್ ಪೂರೈಕೆ ಆಗಿಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಜಾಕ್ ವೆಲ್ ಕಾಮಗಾರಿಯು ಪ್ರಗತಿಯಲ್ಲಿದ್ದು ರಾಫ್ಟ ಪೂರ್ಣಗೊಂಡಿರುತ್ತದೆ. ಜಾಕವೆಲ್ ಗೋಡೆ ಹಾಗೂ ಕಾಲಂಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. |
| 3 | 2023-24 | ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿ | 158.10 | - | - | ಸದರಿ ಯೋಜನೆಗೆ ಸರ್ಕಾರದ ಆದೇಶ ಸಂ:ಜಸಂಇ 180 ಎಂಟಿಪಿ 2023 ದಿನಾಂಕ:07.02.2024 ರಲ್ಲಿ ರೂ.158.10 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>ಸದರಿ ಕಾಮಗಾರಿಯನ್ನು ಆಂಧ್ರಪ್ರದೇಶದ ರಾಜ್ಯದ ಸಹಮತಿ ಪಡೆಯುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಗುತ್ತಿಗೆ ಕರಾರು ಹಂತದಲ್ಲಿರುತ್ತದೆ |
| 4 | 2024-25 | ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 08 ಏತ ನೀರಾವರಿ ಯೋಜನೆಗಳ ಪುನ:ಶ್ಚೇತನ ಕಾಮಗಾರಿ | 149.20 | - | - | ಸರ್ಕಾರದ ಆದೇಶ ಸಂಖ್ಯೆ: ಜಸಂಇ 37ಎಂಪಿ ಜಡ್ 2024, ಬೆಂಗಳೂರು, ದಿನಾಂಕ: 10.09.2024 ಅಡಿ ರೂ 149.20 ಕೋಟಿಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆಕಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು. ಗುತ್ತಿಗೆದಾರರು ಒಪ್ಪಂದ ಮಾಡಕೊಳ್ಳಬೇಕಾಗಿರುತ್ತದೆ. ಒಪ್ಪಂದದ ನಂತರ ಯೋಜನೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. |
| 5 | 2024-25 | ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ | 200.00 | - | - | ಸರ್ಕಾರದ ಆದೇಶ ಸಂ: ಜಸಂಇ/35/ ಎಂಪಿಝಡ್/2024, ಬೆಂಗಳೂರು, ದಿನಾಂಕ: 09/10/2024 ಅಡಿ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿದೆ. ಟೆಂಡರ್ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳಿಸಿ ಯೋಜನೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. |